# ಆಧುನಿಕ ರಂಗಭೂಮಿಯ ಸವಾಲು ಮತ್ತು ಸಾಧ್ಯತೆಗಳು

**ಮಾಧವ ಎಂ.ಕೆ.***

**DOI: https://doi.org/10.5281/zenodo.22106636**

**ABSTRACT**

ರಂಗಭೂಮಿಯು ಮಾನವ ನಾಗರಿಕತೆಯ ಅತ್ಯಂತ ಪ್ರಾಚೀನ ಕಲಾ ಮಾಧ್ಯಮಗಳಲ್ಲಿ ಒಂದು. ಸಮಾಜದ ಜೀವನಶೈಲಿ, ಸಂಸ್ಕೃತಿ, ರಾಜಕೀಯ, ಧಾರ್ಮಿಕ ನಂಬಿಕೆಗಳು ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳು ರಂಗಭೂಮಿಯ ಸ್ವರೂಪವನ್ನು ನಿರಂತರವಾಗಿ ರೂಪಿಸುತ್ತಾ ಬಂದಿವೆ. ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ರಂಗಭೂಮಿಯು ತನ್ನ ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬಂದು ಹೊಸ ಆಯಾಮಗಳನ್ನು ಅಳವಡಿಸಿಕೊಂಡಿದೆ. ಬೆಳಕು, ಧ್ವನಿ, ಡಿಜಿಟಲ್ ಪ್ರೊಜೆಕ್ಷನ್, ಮಲ್ಟಿಮೀಡಿಯಾ, ಸಾಮಾಜಿಕ ಜಾಲತಾಣಗಳು, ಆನ್‌ಲೈನ್ ಪ್ರದರ್ಶನಗಳು ಆಧುನಿಕ ರಂಗಭೂಮಿಯ ಪ್ರಮುಖ ಲಕ್ಷಣಗಳಾಗಿವೆ. ಈ ಲೇಖನವು ರಂಗಭೂಮಿಯಲ್ಲಿನ ಆಧುನಿಕ ಬದಲಾವಣೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

**KEYWORDS:** ರಂಗಭೂಮಿ, ಆಧುನಿಕತೆ, ತಂತ್ರಜ್ಞಾನ, ಡಿಜಿಟಲ್ ರಂಗಭೂಮಿ, ಪ್ರೇಕ್ಷಕರು, ಪ್ರಾಯೋಗಿಕ ನಾಟಕ.

ರಂಗಭೂಮಿಯು ಮಾನವ ನಾಗರಿಕತೆಯ ಆರಂಭದಿಂದಲೂ ಸಮಾಜದ ಜೀವನ, ಸಂಸ್ಕೃತಿ, ಧರ್ಮ, ರಾಜಕೀಯ ಹಾಗೂ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಾ ಬಂದಿರುವ ಅತ್ಯಂತ ಪ್ರಾಚೀನ ಕಲಾ ಮಾಧ್ಯಮ. ಮಾತುಗಾರಿಕೆ, ನೃತ್ಯ, ಸಂಗೀತ, ಅಭಿನಯ, ಸಾಹಿತ್ಯ ಮತ್ತು ದೃಶ್ಯಕಲೆಯ ಸಮನ್ವಯದಿಂದ ರೂಪುಗೊಂಡ ಈ ಕಲೆ ಮಾನವನ ಭಾವನೆಗಳನ್ನು, ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವ ಸಾಧನವಾಗಿದೆ. ಭಾರತೀಯ ಪರಂಪರೆಯಲ್ಲಿ ರಂಗಭೂಮಿಯ ಮೂಲವನ್ನು ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಕಾಣಬಹುದು. ಭರತಮುನಿ ತನ್ನ ನಾಟ್ಯ ಶಾಸ್ತ್ರದಲ್ಲಿ ನಾಟಕವನ್ನು "ಪಂಚಮ ವೇದ" ಎಂದು ಕರೆದಿದ್ದಾರೆ.

ಇಂದು ಸಮಾಜದ ಜೀವನಶೈಲಿ, ರಾಜಕೀಯ ವ್ಯವಸ್ಥೆ, ವೈಜ್ಞಾನಿಕ ಬೆಳವಣಿಗೆ

* **ಡಾ. ಮಾಧವ ಎಂ.ಕೆ.,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ, ಪೆರಿಯ, ಕಾಸರಗೋಡು.

ಮತ್ತು ತಂತ್ರಜ್ಞಾನದ ಪ್ರಭಾವದಿಂದ ರಂಗಭೂಮಿಯು ತನ್ನ ಸ್ವರೂಪದಲ್ಲಿ ಅನೇಕ ಬದಲಾವಣೆಗಳನ್ನು ಕಂಡಿದೆ. ವಿಶೇಷವಾಗಿ ಇಪ್ಪತ್ತೊಂದನೆಯ ಶತಮಾನದಲ್ಲಿ ಡಿಜಿಟಲ್ ತಂತ್ರಜ್ಞಾನ, ಜಾಗತೀಕರಣ ಹಾಗೂ ಹೊಸ ತಲೆಮಾರಿನ ಅಭಿರುಚಿಗಳು ರಂಗಭೂಮಿಯನ್ನು ಸಂಪೂರ್ಣವಾಗಿ ಹೊಸ ದಿಕ್ಕಿನತ್ತ ಕೊಂಡೊಯ್ದಿವೆ. ಇಂದಿನ ರಂಗಭೂಮಿ ಕೇವಲ ಮನರಂಜನೆಯ ಮಾಧ್ಯಮವಲ್ಲ; ಅದು ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವ, ಚಿಂತನೆಗೆ ಪ್ರೇರೇಪಿಸುವ ಮತ್ತು ಸಮಕಾಲೀನ ಪ್ರಶ್ನೆಗಳನ್ನು ಚರ್ಚಿಸುವ ಸಶಕ್ತ ವೇದಿಕೆಯಾಗಿದೆ. ಅಲ್ಲದೆ, ಪೌರಾಣಿಕ ಕಥೆಗಳನ್ನು ರಂಗಭೂಮಿಯಲ್ಲಿ ಅಳವಡಿಸುವ ಮೂಲಕ ಪುರಾಣದ ಕಥೆಗಳನ್ನು ರಂಗದ ಮೇಲೆ ಪ್ರದರ್ಶಿಸುತ್ತವೆ.

**ರಂಗಭೂಮಿಯ ಇತಿಹಾಸ**

ಭಾರತೀಯ ರಂಗಭೂಮಿಗೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನ ಇತಿಹಾಸವಿದೆ. ಸಂಸ್ಕೃತ ನಾಟಕಗಳ ಮೂಲಕ ಆರಂಭವಾದ ಈ ಪರಂಪರೆ ನಂತರ ಪ್ರಾದೇಶಿಕ ಭಾಷೆಗಳಲ್ಲಿ ನಾಟಕಗಳು ರಂಗದಲ್ಲಿ ಕಾಣಿಸಿಕೊಳ್ಳುವುದಕ್ಕೆ ಆರಂಭವಾಯಿತು. ಕಾಳಿದಾಸ, ಭಾಸ, ಶೂದ್ರಕ, ಭವಭೂತಿ ಮೊದಲಾದ ನಾಟಕಕಾರರು ಭಾರತೀಯ ರಂಗಭೂಮಿಗೆ ಅಗಾಧವಾದ ಕೊಡುಗೆಯನ್ನು ನೀಡಿದ್ದಾರೆ.

ಕರ್ನಾಟಕದಲ್ಲಿ ಯಕ್ಷಗಾನ, ಬಯಲಾಟ, ತಾಳಮದ್ದಲೆ, ಸಣ್ಣಾಟ ಮೊದಲಾದ ಜನಪದ ರಂಗರೂಪಗಳು ಇದ್ದರೂ, ಬ್ರಿಟಿಷರ ಆಳ್ವಿಕೆಯ ನಂತರ ಪಾಶ್ಚಾತ್ಯ ರಂಗಭೂಮಿಯ ಪ್ರಭಾವವೂ ಭಾರತದ ಮೇಲಾಯಿತು. ನಂತರದ ದಿನಗಳಲ್ಲಿ ವೃತ್ತಿಪರ ರಂಗಭೂಮಿ ಆರಂಭವಾಗಿ ಒಂದು ಕ್ರಾಂತಿಯನ್ನೇ ಆರಂಭಿಸಿತು. ರಂಗತರಬೇತಿ ಕೇಂದ್ರಗಳು, ರಂಗ ಶಾಲೆಗಳು ಆರಂಭವಾಗಿ ರಂಗಾಸಕ್ತರಿಗೆ ವೃತ್ತಿಪರ ವೇದಿಕೆಯನ್ನು ದೊರಕಿಸಿತು. ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಶಿವರಾಮ ಕಾರಂತ, ಬಿ.ವಿ. ಕಾರಂತ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಲಂಕೇಶ್ ಮುಂತಾದವರು ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿದರು. ಹೀಗೆ ಹಿಂದಿನ ಸಂಪ್ರದಾಯದೊಂದಿಗೆ ಆಧುನಿಕತೆಯ ಮೂಲಕ ರಂಗಭೂಮಿಯು ನಿರಂತರವಾಗಿ ವಿಕಸನಗೊಳ್ಳುತ್ತಾ ಒಂದಷ್ಟು ಸಂಶೋಧನೆಗೆ ಒಳಪಡುತ್ತಾ ಬಂತು.

**ಆಧುನಿಕ ರಂಗಭೂಮಿ**

ಆಧುನಿಕ ರಂಗಭೂಮಿ ಎಂದರೆ ಕೇವಲ ಹೊಸ ಕಾಲದಲ್ಲಿ ಪ್ರದರ್ಶಿಸಲ್ಪಡುವ ನಾಟಕವಲ್ಲ. ಅದು ಹೊಸ ತಂತ್ರಜ್ಞಾನ, ಹೊಸ ಕಲ್ಪನೆಗಳು, ಹೊಸ ಪ್ರದರ್ಶನ ಶೈಲಿ ಹಾಗೂ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಒಳಗೊಂಡಿರುವ ಸೃಜನಾತ್ಮಕ ರಂಗ ಪ್ರಯೋಗವಾಗಿದೆ. ಇಲ್ಲಿ ವೀಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಜೊತೆಗೆ ಆರ್ಥಿಕತೆಯನ್ನು ಬಲಪಡಿಸುವುದು ಉದ್ದೇಶವಾಗಿದೆ. ರಂಗಸಜ್ಜಿಕೆಯಿಂದ ಹಿಡಿದು ನಟನೆಯವರೆಗೆ ಪ್ರೇಕ್ಷಕರನ್ನು ಮುಟ್ಟುವುದು ಸಾಮಾನ್ಯ ಸಂಗತಿಯಲ್ಲ. ಅಲ್ಲಿ ಸುದೀರ್ಘವಾದ ಸಿದ್ಧತೆ ಎಲ್ಲವನ್ನು ಮಾಡಿಕೊಂಡಿರಬೇಕು. ಇಂದಿನ ನಿರ್ದೇಶಕರು ಕೇವಲ ಕಥೆಯನ್ನು ಹೇಳುವುದಲ್ಲದೆ, ದೃಶ್ಯ, ಧ್ವನಿ, ಬೆಳಕು, ಸಂಗೀತ ಮತ್ತು ಡಿಜಿಟಲ್ ಮಾಧ್ಯಮಗಳನ್ನು ಸಮನ್ವಯಗೊಳಿಸಿ ಪ್ರೇಕ್ಷಕರಿಗೆ ವಿಭಿನ್ನ ಅನುಭವವನ್ನು ನೀಡುತ್ತಾರೆ. ಪೌರಾಣಿಕ ಕಥೆಗಳನ್ನು ಆಧುನಿಕತೆಯೊಂದಿಗೆ ಕಟ್ಟಿಕೊಟ್ಟು ವಿಭಿನ್ನ ಶೈಲಿಯಲ್ಲಿ ಕಥೆಯನ್ನು ಹೆಣೆಯುವ ಚಾತುರ್ಯ, ಜವಾಬ್ದಾರಿ ನಿರ್ದೇಶಕನಲ್ಲಿರುತ್ತದೆ. ಆಧುನಿಕ ರಂಗಭೂಮಿಯ ಉದ್ದೇಶ ಸಮಾಜದ

ವಾಸ್ತವಿಕತೆಯನ್ನು ಅನಾವರಣಗೊಳಿಸುವುದು, ಜನರಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವುದು ಹಾಗೂ ಸಾಮಾಜಿಕ ಪರಿವರ್ತನೆಗೆ ಪ್ರೇರಣೆ ನೀಡುವುದಾಗಿದೆ.

ನಾ. ದಾಮೋದರ ಶೆಟ್ಟಿ ಅವರು ತಮ್ಮ 'ರಂಗನಿಮಿತ್ತ' ಪುಸ್ತಕದಲ್ಲಿ ಉಲ್ಲೇಖಿಸಿರುವಂತೆ 'ರಂಗಭೂಮಿ 60ರ ದಶಕದ ಆರಂಭದಲ್ಲಿ ದೆಹಲಿಯಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಮೂಲಕ ಅದರ ನಿರ್ದೇಶಕರಾಗಿದ್ದ ಅಲ್ಕಾಜಿಯವರು ರಾಷ್ಟ್ರೀಯ ರಂಗಭೂಮಿಯ ಪರಿಕಲ್ಪನೆಯನ್ನು ನಮ್ಮ ನಡುವೆ ಬಿತ್ತಿದಲ್ಲಿಂದ ಮೊದಲಗೊಂಡು ಭಾರತೀಯ ಪ್ರಾದೇಶಿಕ ರಂಗಭೂಮಿಯ ಗತಿಯಲ್ಲಿ ಬದಲಾವಣೆ ಕಾಣಿಸಿಕೊಂಡಿತು' (ಪು. ಸಂ. 132) ಎಂದಿದ್ದಾರೆ. ರಂಗಭೂಮಿ ಕಾಲಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ತನ್ನಲ್ಲಿ ಮಾಡಿಕೊಂಡು ಹೊಸ ಮಾರ್ಗಕ್ಕೆ ತೆರೆದುಕೊಂಡಿತು.

ಆಧುನಿಕ ರಂಗಭೂಮಿಯಲ್ಲಿ ರಂಗ ನಿರ್ದೇಶಕರಿಗೆ ಇರುವ ಅತಿದೊಡ್ಡ ಸವಾಲು ಎಂದರೆ ಪ್ರೇಕ್ಷಕನನ್ನು ಹಿಡಿದಿಟ್ಟುಕೊಳ್ಳುವುದು. ಅದಕ್ಕಾಗಿ ಆತ ಆಧುನಿಕ ತಂತ್ರಜ್ಞಾನವನ್ನು ತನ್ನ ವಿಚಾರಗಳೊಂದಿಗೆ ಅಳವಡಿಸಿಕೊಳ್ಳಬೇಕಾಗುತ್ತದೆ. ಹಿಂದೆ ರಂಗಸಜ್ಜಿಕೆ ಮತ್ತು ದೃಶ್ಯಗಳನ್ನು ಕೈಯಿಂದ ನಿರ್ಮಿಸಲಾಗುತ್ತಿತ್ತು. ಆದರೆ ಈಗ ಕಂಪ್ಯೂಟರ್, ಎಲ್‌ಇಡಿ (LED) ಪರದೆಗಳು, ಡಿಜಿಟಲ್ ಪ್ರೊಜೆಕ್ಷನ್, 3ಡಿ ಮ್ಯಾಪಿಂಗ್, ಸ್ವಯಂಚಾಲಿತ ವೇದಿಕೆ, ಕಂಪ್ಯೂಟರ್ ನಿಯಂತ್ರಿತ ಬೆಳಕು ಮತ್ತು ಧ್ವನಿ ವ್ಯವಸ್ಥೆಗಳನ್ನು ಬಳಸಲಾಗುತ್ತಿವೆ. ಈ ತಂತ್ರಜ್ಞಾನಗಳಿಂದ ಅಲ್ಪ ಸಮಯದಲ್ಲಿಯೇ ವಿಭಿನ್ನ ದೃಶ್ಯಗಳನ್ನು ಸೃಷ್ಟಿಸಬಹುದು. ಉದಾ: ಒಂದು ದೃಶ್ಯದಲ್ಲಿ ಅರಮನೆ, ಮತ್ತೊಂದು ದೃಶ್ಯದಲ್ಲಿ ಅರಣ್ಯ ಅಥವಾ ಸಮುದ್ರವನ್ನು ಡಿಜಿಟಲ್ ಪ್ರೊಜೆಕ್ಷನ್ ಮೂಲಕ ಕ್ಷಣಾರ್ಧದಲ್ಲಿ ತೋರಿಸಬಹುದು. ಇದರಿಂದ ಸಮಯ ಉಳಿತಾಯವಾಗುವುದರ ಜೊತೆಗೆ ಪ್ರೇಕ್ಷಕರಿಗೆ ನೈಜ ಅನುಭವ ದೊರೆಯುತ್ತದೆ.

ರಂಗಭೂಮಿಯಲ್ಲಿ ಬೆಳಕು ಕೇವಲ ದೃಶ್ಯವನ್ನು ಕಾಣುವ ಸಾಧನವಲ್ಲ; ಅದು ಭಾವನೆಗಳನ್ನು ವ್ಯಕ್ತಪಡಿಸುವ ಕಲಾತ್ಮಕ ಮಾಧ್ಯಮವಾಗಿದೆ. ಹಿಂದೆ ಸಾಮಾನ್ಯ ದೀಪಗಳು ಅಥವಾ ಫೋಕಸ್ ಲೈಟ್‌ಗಳನ್ನು ಬಳಸಲಾಗುತ್ತಿತ್ತು. ಈಗ ಎಲ್‌ಇಡಿ ಮೂವಿಂಗ್ ಹೆಡ್ ಲೈಟ್, ಫಾಲೋ ಸ್ಪಾಟ್, ಲೇಸರ್ ಲೈಟ್ ಮತ್ತು ಕಂಪ್ಯೂಟರ್ ನಿಯಂತ್ರಿತ ಬೆಳಕು ಮೊದಲಾದವುಗಳನ್ನು ಬಳಸಲಾಗುತ್ತಿದೆ.

ಬೆಳಕಿನ ಮೂಲಕ ರಂಗದಲ್ಲಿ ನಡೆಯುವ ಪ್ರತಿಯೊಂದು ಭಾವ, ರಸಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸುವ ಪರಿಕರಗಳು ಬಂದಿವೆ. ಆಧುನಿಕ ವಿನ್ಯಾಸಕ್ಕೆ ತಕ್ಕಂತೆ ಬೆಳಕಿನ ಬಣ್ಣ, ತೀವ್ರತೆ ಹಾಗೂ ದಿಕ್ಕಿನ ಮೂಲಕ ಸಂತೋಷ, ದುಃಖ, ಭಯ, ರಹಸ್ಯ, ಪ್ರೀತಿ ಅಥವಾ ಉದ್ವಿಗ್ನತೆಯಂತಹ ಭಾವನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮೂಡಿಸಬಹುದು. ರಂಗ ಪ್ರಯೋಗಗಳು ಸಾಮಾನ್ಯವಾಗಿ ರಾತ್ರಿ ಹೊತ್ತಿನಲ್ಲಿ ನಡೆಯುವುದರಿಂದ ಬೆಳಕಿನ ಪ್ರಯೋಗ ಅತ್ಯಂತ ಪರಿಣಾಮಕಾರಿಯಾಗಿದ್ದರೆ ಮಾತ್ರ ಅದು ಪ್ರೇಕ್ಷಕರನ್ನು ತಲುಪುವುದಕ್ಕೆ ಸಾಧ್ಯ. ಅಂತಹ ಬದಲಾವಣೆಗಳನ್ನು ಪ್ರೇಕ್ಷಕನು ಬಯಸುತ್ತಾನೆ. ಆದ್ದರಿಂದ ಬೆಳಕಿನ ವಿನ್ಯಾಸವು ಆಧುನಿಕ ರಂಗಭೂಮಿಯ ಪ್ರಮುಖ ಕಲಾತ್ಮಕ ಅಂಶವೆಂದರೆ ತಪ್ಪಾಗಲಾರದು.

ರಂಗಭೂಮಿಯಲ್ಲಿ ಬೆಳಕಿನಷ್ಟೇ ಪ್ರಾಮುಖ್ಯತೆಯನ್ನು ಪಡೆಯುತ್ತಿರುವುದು ಧ್ವನಿವರ್ಧಕಗಳು. ಧ್ವನಿ ವ್ಯವಸ್ಥೆಯೂ ಹಿಂದಿಗಿಂತ ಮಹತ್ವದ ಬದಲಾವಣೆಯನ್ನು ಕಂಡಿದೆ. ಡಿಜಿಟಲ್ ಮಿಕ್ಸಿಂಗ್ ಕನ್ಸೋಲ್, ವೈರ್‌ಲೆಸ್ ಮೈಕ್ರೋಫೋನ್, ಸರೌಂಡ್ ಸೌಂಡ್ ಹಾಗೂ

ಧ್ವನಿ ಪರಿಣಾಮಗಳ ಮೂಲಕ ಪ್ರೇಕ್ಷಕರಿಗೆ ನೈಜ ಅನುಭವವನ್ನು ನೀಡುತ್ತದೆ. ಇತ್ತೀಚೆಗಂತೂ ಸಂಭಾಷಣೆಯನ್ನು ಮೊದಲೇ ದಾಖಲಿಸಿ ನಂತರ ಅದಕ್ಕೆ ತಕ್ಕಂತೆ ನಟಿಸುವ ಅಥವಾ ಅನುಕರಿಸುವ ಬದಲಾವಣೆಯು ಬಂದಿರುವುದು ಗಮನಾರ್ಹ.

ದೃಶ್ಯ ವಿನ್ಯಾಸವೂ, ರಂಗಭೂಮಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪ್ರೇಕ್ಷಕರನ್ನು ಆಕರ್ಷಿಸಲು, ಕಥೆಯಲ್ಲಿ ನೈಜತೆಯನ್ನು ಕಾಪಾಡಿಕೊಳ್ಳಲು ಇದರಿಂದ ಸಾಧ್ಯವಾಗುವುದು. ಇದು ರಂಗಭೂಮಿಯ ಸೌಂದರ್ಯವನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಹಿಂದೆ ಮರ, ಬಟ್ಟೆ ಮತ್ತು ಬಣ್ಣಗಳಿಂದ ಸಾಂಪ್ರದಾಯಿಕ ಸೆಟ್‌ಗಳನ್ನು ನಿರ್ಮಿಸಲಾಗುತ್ತಿತ್ತು. ಆದರೆ ಈಗ ಡಿಜಿಟಲ್ ಹಿನ್ನೆಲೆ, ಪ್ರೊಜೆಕ್ಷನ್ ಮ್ಯಾಪಿಂಗ್, ಚಲಿಸುವ ಸೆಟ್‌ಗಳು ಹಾಗೂ ವರ್ಚುವಲ್ ದೃಶ್ಯಗಳನ್ನು ಬಳಸಲಾಗುತ್ತಿದೆ. ಇದರಿಂದ ವೇದಿಕೆಯು ಹೆಚ್ಚು ಆಕರ್ಷಕವಾಗುವುದರ ಜೊತೆಗೆ ಕಲಾವಿದರ ಅಭಿನಯಕ್ಕೂ ಹೆಚ್ಚಿನ ಜೀವಂತಿಕೆ ದೊರೆಯುತ್ತದೆ.

ಪ್ರಾಚೀನ ನಾಟಕಗಳಲ್ಲಿ ಪೌರಾಣಿಕ, ಐತಿಹಾಸಿಕ ಹಾಗೂ ಧಾರ್ಮಿಕ ಕಥೆಗಳು ಪ್ರಧಾನವಾಗಿದ್ದವು. ಆದರೆ ಆಧುನಿಕ ರಂಗಭೂಮಿಯು ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ತನ್ನ ಕಥಾವಸ್ತುವಾಗಿ ಆಯ್ಕೆ ಮಾಡಿಕೊಳ್ಳುತ್ತಿದೆ. ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ, ನಿರುದ್ಯೋಗ, ಭ್ರಷ್ಟಾಚಾರ, ನಗರೀಕರಣ, ಲಿಂಗ ಸಮಾನತೆ, ಮಾನಸಿಕ ಆರೋಗ್ಯ, ತಂತ್ರಜ್ಞಾನದ ದುರುಪಯೋಗ ಹಾಗೂ ಮಾನವ ಹಕ್ಕುಗಳಂತಹ ವಿಷಯಗಳು ಇಂದಿನ ನಾಟಕಗಳಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಇದರಿಂದ ರಂಗಭೂಮಿಯು ಸಮಾಜದ ಸಮಸ್ಯೆಗಳನ್ನು ಚರ್ಚಿಸುವ ಪರಿಣಾಮಕಾರಿ ವೇದಿಕೆಯಾಗುತ್ತಿದೆ.

ಭಾರತೀಯ ರಂಗಭೂಮಿಯ ಇತಿಹಾಸದಲ್ಲಿ ಮಹಿಳೆಯರ ಪಾತ್ರವು ಗಮನಾರ್ಹವಾದ ಬದಲಾವಣೆಗಳನ್ನು ಕಂಡಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ರಂಗಭೂಮಿಯಲ್ಲಿ ಮಹಿಳೆಯರ ಸಾರ್ವಜನಿಕ ಭಾಗವಹಿಸುವಿಕೆಗೆ ಸಾಮಾಜಿಕ ಹಾಗೂ ಧಾರ್ಮಿಕ ನಿರ್ಬಂಧಗಳಿದ್ದ ಕಾರಣ ಮಹಿಳಾ ಪಾತ್ರಗಳನ್ನು ಪುರುಷ ಕಲಾವಿದರೇ ನಿರ್ವಹಿಸುತ್ತಿದ್ದರು. ನಂತರ ವೃತ್ತಿಪರ ರಂಗಭೂಮಿಯ ಬೆಳವಣಿಗೆಯೊಂದಿಗೆ ಮಹಿಳೆಯರು ನಟಿಯರಾಗಿ ರಂಗಭೂಮಿಗೆ ಪ್ರವೇಶಿಸಿದರು. ಆದರೆ ಅವರ ಪಾತ್ರವು ಹೆಚ್ಚಾಗಿ ಅಭಿನಯಕ್ಕೆ ಮಾತ್ರ ಸೀಮಿತವಾಗಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಆಧುನಿಕ ರಂಗಭೂಮಿಯಲ್ಲಿನ ಮಹತ್ತರ ಬದಲಾವಣೆ ಎಂಬಂತೆ ಮಹಿಳೆಯರು ರಂಗಭೂಮಿಯ ವಿವಿಧ ಮಜಲುಗಳಲ್ಲಿ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ಮಹಿಳೆಯರು ಕೇವಲ ನಟಿಯರಾಗಿ ಮಾತ್ರವಲ್ಲದೆ, ನಿರ್ದೇಶಕಿಯರು, ನಾಟಕಕಾರರು, ರಂಗವಿನ್ಯಾಸಕರು, ಬೆಳಕು ವಿನ್ಯಾಸಕರು, ಸಂಗೀತ ನಿರ್ದೇಶಕಿಯರು, ನಿರ್ಮಾಪಕರು ಮತ್ತು ಸಂಶೋಧಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳೆಯರ ಜೀವನಾನುಭವ, ಲಿಂಗಸಮಾನತೆ, ಕುಟುಂಬ ವ್ಯವಸ್ಥೆ, ಮಹಿಳಾ ಹಕ್ಕುಗಳು, ಲೈಂಗಿಕ ದೌರ್ಜನ್ಯ, ಶಿಕ್ಷಣ ಮತ್ತು ಸ್ವಾವಲಂಬನೆಯಂತಹ ವಿಷಯಗಳು ನಾಟಕಗಳ ಪ್ರಮುಖ ಕಥಾವಸ್ತುಗಳಾಗಿ ಪ್ರದರ್ಶಿಸಲ್ಪಡುತ್ತಿವೆ.

ಮಹಿಳಾ ರಂಗಭೂಮಿಯ ಬೆಳವಣಿಗೆಯಿಂದ ಮಹಿಳೆಯರ ಧ್ವನಿಗೆ ಹೊಸ ವೇದಿಕೆ ದೊರೆತಿದೆ. ಮಹಿಳೆಯರ ಬದುಕಿನ ವಾಸ್ತವಿಕತೆಯನ್ನು ಆಧರಿಸಿದ ನಾಟಕಗಳು ಸಮಾಜದಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಹೀಗಾಗಿ ಆಧುನಿಕ ರಂಗಭೂಮಿಯು ಮಹಿಳೆಯರಿಗೆ ಸೃಜನಶೀಲತೆ ಮತ್ತು ನಾಯಕತ್ವ ಪ್ರದರ್ಶಿಸಲು ಸಮಾನ ಅವಕಾಶಗಳನ್ನು

ಕಲ್ಪಿಸಿದೆ. ಹಾಗಾಗಿಯೇ ಅವರ ರಂಗಭೂಮಿಯ ಸೇವೆ ಮನ್ನಣೆಗೆ ಪಾತ್ರವಾಗಿದೆ.

ಸಾಂಪ್ರದಾಯಿಕ ರಂಗಭೂಮಿಯಲ್ಲಿ ಪ್ರೇಕ್ಷಕರು ಕೇವಲ ನಾಟಕವನ್ನು ವೀಕ್ಷಿಸುವವರಾಗಿದ್ದರು. ಅವರ ಪಾತ್ರವು ಚಪ್ಪಾಳೆ ತಟ್ಟುವುದು ಅಥವಾ ಅಭಿಪ್ರಾಯ ವ್ಯಕ್ತಪಡಿಸುವ ಮಟ್ಟಕ್ಕೆ ಸೀಮಿತವಾಗಿತ್ತು. ಆದರೆ ಆಧುನಿಕ ರಂಗಭೂಮಿಯಲ್ಲಿ ಪ್ರೇಕ್ಷಕರನ್ನು ನಾಟಕದ ಸಕ್ರಿಯ ಭಾಗವನ್ನಾಗಿ ಮಾಡಲಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಪ್ರೇಕ್ಷಕರು ತಮ್ಮ ಅಭಿಪ್ರಾಯಗಳನ್ನು ತಕ್ಷಣವೇ ಹಂಚಿಕೊಳ್ಳುತ್ತಾರೆ. ವಿಮರ್ಶೆಗಳು, ಚರ್ಚೆಗಳು ಮತ್ತು ಪ್ರತಿಕ್ರಿಯೆಗಳು ನಾಟಕದ ಜನಪ್ರಿಯತೆಯನ್ನು ಹೆಚ್ಚಿಸುತ್ತವೆ. ಹೀಗಾಗಿ ಪ್ರೇಕ್ಷಕರು ಕೇವಲ ವೀಕ್ಷಕರಾಗದೆ ವಿಮರ್ಶಕರಾಗಿರುವುದು, ರಂಗಭೂಮಿಯ ಬೆಳವಣಿಗೆಯ ಒಂದು ಭಾಗವಾಗಿದ್ದಾರೆ.

ಡಿಜಿಟಲ್ ಯುಗದಲ್ಲಿ ರಂಗಭೂಮಿಯು ಹೊಸ ರೂಪವನ್ನು ಪಡೆದುಕೊಂಡಿದ್ದು ವಿಶೇಷವಾಗಿ ಕೋವಿಡ್–19 ಮಹಾಮಾರಿಯ ಸಂದರ್ಭದಲ್ಲಿ. ಆ ಸಂದರ್ಭದಲ್ಲಿ ರಂಗಮಂದಿರಗಳು ಮುಚ್ಚಲ್ಪಟ್ಟಾಗ, ಆನ್‌ಲೈನ್ ಪ್ರದರ್ಶನಗಳು ಹೊಸ ಪರ್ಯಾಯ ವ್ಯವಸ್ಥೆಯಾಗಿ ಬೆಳೆಯಿತು. Zoom Theatre, Live Streaming, Hybrid Theatre ಹಾಗೂ Virtual Theatre ಮಾದರಿಗಳು ಜನಪ್ರಿಯವಾದವು. ಇನ್ನೊಂದೆಡೆಯಲ್ಲಿ ಕಾಲಮಿತಿಯ ಪ್ರದರ್ಶನಗಳು ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ಅನುಕೂಲ ಮಾಡಿಕೊಟ್ಟಿತು. ಡಿಜಿಟಲ್ ರಂಗಭೂಮಿಯ ಪ್ರಮುಖ ಪ್ರಯೋಜನವೆಂದರೆ ಭೌಗೋಳಿಕ ಮಿತಿಗಳನ್ನು ಮೀರಿ ವಿಶ್ವದ ಯಾವುದೇ ಭಾಗದಲ್ಲಿರುವ ಪ್ರೇಕ್ಷಕರನ್ನು ತಲುಪುವ ಸಾಧ್ಯತೆ. ಇದರಿಂದ ಕಲಾವಿದರಿಗೆ ಹೊಸ ಪ್ರೇಕ್ಷಕರ ವರ್ಗ ಲಭ್ಯವಾಯಿತು. ನೇರ ಪ್ರದರ್ಶನದ ಅನಾನುಕೂಲತೆ ಇದ್ದವರು ತಾವಿದ್ದ ಸ್ಥಳದಿಂದಲೇ ವೀಕ್ಷಿಸುವುದಕ್ಕೆ ಸಾಧ್ಯವಾಯಿತು.

ಆದಾಗ್ಯೂ, ನೇರ ರಂಗ ಪ್ರದರ್ಶನದಲ್ಲಿ ದೊರೆಯುವ ಭಾವನಾತ್ಮಕ ಅನುಭವ ಮತ್ತು ಕಲಾವಿದ–ಪ್ರೇಕ್ಷಕರ ನಡುವಿನ ಜೀವಂತ ಸಂವಾದವನ್ನು ಡಿಜಿಟಲ್ ಮಾಧ್ಯಮ ಸಂಪೂರ್ಣವಾಗಿ ನೀಡಲು ಸಾಧ್ಯವಿಲ್ಲ. ಆದ್ದರಿಂದ ಡಿಜಿಟಲ್ ರಂಗಭೂಮಿ ಸಾಂಪ್ರದಾಯಿಕ ರಂಗಭೂಮಿಗೆ ಪರ್ಯಾಯವಲ್ಲ, ಪೂರಕ ಮಾಧ್ಯಮವೆಂದು ಪರಿಗಣಿಸಲಾಗುತ್ತಿದೆ.

ಕನ್ನಡ ರಂಗಭೂಮಿಯು ಆಧುನಿಕ ಕಾಲದಲ್ಲಿ ಹೊಸ ಚಿಂತನೆಗಳು ಮತ್ತು ಪ್ರಯೋಗಗಳಿಂದ ಸಮೃದ್ಧವಾಗಿದೆ. ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಬಿ. ವಿ. ಕಾರಂತ, ಹೆಚ್. ಎಸ್. ಶಿವಪ್ರಕಾಶ್ ಮೊದಲಾದವರು ಕನ್ನಡ ರಂಗಭೂಮಿಯನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ್ದಾರೆ.

ಇಂದಿನ ಕನ್ನಡ ರಂಗಭೂಮಿಯಲ್ಲಿ ಜನಪದ ಮತ್ತು ಆಧುನಿಕ ತಂತ್ರಜ್ಞಾನದ ಸಮನ್ವಯವನ್ನು ಕಾಣಬಹುದು. ಯಕ್ಷಗಾನ, ತಾಳಮದ್ದಲೆ ಹಾಗೂ ಬಯಲಾಟದ ಅಂಶಗಳನ್ನು ಆಧುನಿಕ ರಂಗಭೂಮಿಯೊಂದಿಗೆ ಸಂಯೋಜಿಸಿ ಹೊಸ ಪ್ರಯೋಗಗಳನ್ನು ಮಾಡಲಾಗುತ್ತಿದೆ. ಮಕ್ಕಳ ನಾಟಕ, ಮಹಿಳಾ ರಂಗಭೂಮಿ, ಬೀದಿ ನಾಟಕ, ಪರಿಸರ ನಾಟಕ ಹಾಗೂ ಶೈಕ್ಷಣಿಕ ನಾಟಕಗಳಂತಹ ಹೊಸ ಪ್ರಕಾರಗಳು ಅಭಿವೃದ್ಧಿ ಹೊಂದಿವೆ.

**ಆಧುನಿಕ ರಂಗಭೂಮಿಯ ಸವಾಲುಗಳು**

ಆಧುನಿಕ ರಂಗಭೂಮಿಯು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಸಿನಿಮಾ, ದೂರದರ್ಶನ ಮತ್ತು ಒಟಿಟಿ (OTT) ವೇದಿಕೆಗಳ ಜನಪ್ರಿಯತೆಯಿಂದ ನೇರ ನಾಟಕಗಳಿಗೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ. ಉತ್ತಮ ರಂಗಮಂದಿರಗಳ ಕೊರತೆ, ಆರ್ಥಿಕ

ಸಂಕಷ್ಟ, ಪ್ರಾಯೋಜಕರ ಅಭಾವ ಹಾಗೂ ಕಲಾವಿದರಿಗೆ ಸಮರ್ಪಕ ಸಂಭಾವನೆ ದೊರೆಯದಿರುವುದು ಪ್ರಮುಖ ಸಮಸ್ಯೆಗಳಾಗಿವೆ. ಯುವಜನರಲ್ಲಿ ರಂಗಭೂಮಿಯತ್ತ ಆಸಕ್ತಿ ಕಡಿಮೆಯಾಗುತ್ತಿರುವುದು ಮತ್ತೊಂದು ಸವಾಲಾಗಿದೆ. ವೃತ್ತಿಪರ ತರಬೇತಿ ಪಡೆದ ಕಲಾವಿದರ ಕೊರತೆಯೂ ರಂಗಭೂಮಿಯ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ. ಹಿರಿಯ ಪರಂಪರೆಗಳು ತೆರೆಗೆ ಸರಿಯುತ್ತಿದ್ದಂತೆ ಹೊಸ ತಲೆಮಾರುಗಳು ತಮ್ಮದೇ ಆದ ಚಿಂತನೆಯೊಂದಿಗೆ ಪ್ರಯೋಗಗಳಲ್ಲಿ ತೊಡಗುತ್ತಿವೆ. ಇದರಿಂದ ಸಾಂಪ್ರದಾಯಿಕ ಶೈಲಿಗಳು ಮಾಯವಾಗಿ ಹೊಸ ಮಾದರಿಗಳು ಕಾಣಿಸಿಕೊಳ್ಳುತ್ತಿರುವುದನ್ನು ಕೆಲ ವರ್ಗ ಒಪ್ಪಿಕೊಳ್ಳುತ್ತಿಲ್ಲ. ಇದಲ್ಲದೆ, ಡಿಜಿಟಲ್ ಯುಗದಲ್ಲಿ ನಿರಂತರವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವೂ ಹೆಚ್ಚುತ್ತಿದೆ. ಇದಕ್ಕಾಗಿ ಹೆಚ್ಚಿನ ಆರ್ಥಿಕ ಸಂಪನ್ಮೂಲ ಮತ್ತು ತಾಂತ್ರಿಕ ಪರಿಣತಿ ಅಗತ್ಯವಿದೆ. ಇದನ್ನೆಲ್ಲಾ ನಿಭಾಯಿಸುವುದು ಕಷ್ಟವಾದಾಗ ಪ್ರದರ್ಶನಗಳಲ್ಲಿ ಕುಸಿತ ಕಾಣುವುದು ಸಹಜವಾಗಿದೆ.

**ಉಪಸಂಹಾರ**

ರಂಗಭೂಮಿಯು ಕಾಲ ಸರಿದಂತೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಸಮಾಜದೊಂದಿಗೆ ನಿರಂತರ ಸಂವಾದ ನಡೆಸುತ್ತಿರುವ ಜೀವಂತ ಕಲಾ ಪ್ರಕಾರವಾಗಿದೆ. ತಂತ್ರಜ್ಞಾನ, ಜಾಗತೀಕರಣ, ಸಾಮಾಜಿಕ ಬದಲಾವಣೆಗಳು ಹಾಗೂ ಹೊಸ ತಲೆಮಾರಿನ ಚಿಂತನೆಗಳು ರಂಗಭೂಮಿಗೆ ಹೊಸ ರೂಪವನ್ನು ನೀಡಿವೆ. ಆಧುನಿಕ ರಂಗಭೂಮಿಯು ಕೇವಲ ಮನರಂಜನೆಯ ಸಾಧನವಲ್ಲ; ಅದು ಶಿಕ್ಷಣ, ಸಾಮಾಜಿಕ ಜಾಗೃತಿ, ಸಾಂಸ್ಕೃತಿಕ ಸಂರಕ್ಷಣೆ ಹಾಗೂ ಮಾನವೀಯ ಮೌಲ್ಯಗಳನ್ನು ಹೆಚ್ಚಿಸುತ್ತಿರುವ ಪ್ರಬಲ ಮಾಧ್ಯಮವಾಗಿದೆ.

ಆದಾಗ್ಯೂ, ತಂತ್ರಜ್ಞಾನವು ರಂಗಭೂಮಿಯ ಆತ್ಮವಾದ ಜೀವಂತ ಅಭಿನಯ ಮತ್ತು ಕಲಾತ್ಮಕ ಅನುಭವವನ್ನು ಮೀರಬಾರದು. ಪರಂಪರೆಯ ಮೌಲ್ಯಗಳನ್ನು ಉಳಿಸಿಕೊಂಡು ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಅಳವಡಿಸಿಕೊಂಡಾಗ ಮಾತ್ರ ರಂಗಭೂಮಿಯ ಭವಿಷ್ಯ ಇನ್ನಷ್ಟು ಉಜ್ವಲವಾಗಲಿದೆ. ಹೀಗಾಗಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ಸಮನ್ವಯವೇ ಭವಿಷ್ಯದ ರಂಗಭೂಮಿಯ ಯಶಸ್ಸಿನ ಮೂಲಾಧಾರವೆಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**

1. ಗಿರೀಶ್ ಕಾರ್ನಾಡ್, (2019), ಸಮಗ್ರ ನಾಟಕಗಳು, ನವದೆಹಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.
2. ಚಂದ್ರಶೇಖರ ಕಂಬಾರ, (2011), ಆಯ್ದ ನಾಟಕಗಳು, ನವದೆಹಲಿ: ಸಾಹಿತ್ಯ ಅಕಾಡೆಮಿ.
3. ಸರ್ವೇಶ್ ಬಿ. ಎಸ್., ಸಯ್ಯದ್ ಮುಯಿನ್, ಚಂದ್ರಶೇಖರ್ ಎನ್. ಮತ್ತು ರವಿಶಂಕರ ಎ. ಕೆ., (2020), ಕನ್ನಡ ಸಾಹಿತ್ಯ: ನಾಟಕ, ರಂಗಭೂಮಿ ಮತ್ತು ಸಿನಿಮಾ, ನೆಲಮಂಗಲ, ಬೆಂಗಳೂರು: ವಂಶಿ ಪಬ್ಲಿಕೇಷನ್.
4. ದಾಮೋದರ ಶೆಟ್ಟಿ ನಾ., (2017), ರಂಗನಿಮಿತ್ತ, ಬೆಂಗಳೂರು: ಸಿರಿವರ ಪ್ರಕಾಶನ.